ಪ್ರತಿಬಿಂಬ

PRATIBIMBA –Multidisciplinary Kannada Research Journal of IIMRD
ISSN: 2582-2284
Vol-5, Special Issue 2, March-April, 2024, Pp. 51-58.
©*IIMRD*, Mysuru
www.iimrd.com

# ಶಿರಶಿಯ ಶ್ರೀ ಮಾರಿಕಾಂಬಾ: ಒಂದು ಸಾಂಸ್ಕೃತಿಕ ಇತಿಹಾಸ

**ನಾರಾಯಣ ಗೌಡ[1] ಮತ್ತು ಡಾ.ಲೊಕೇಶ[2]**

[1]ಸಂಶೋಧನಾ ವಿದ್ಯಾರ್ಥಿ, ಇತಿಹಾಸ ವಿಭಾಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.
[2]ಸಹ ಪ್ರಾಧ್ಯಾಪಕರು, ಇತಿಹಾಸ ವಿಭಾಗ, ಸರ್ಕಾರಿ ಪ್ರಥಮದರ್ಜೆ ಕಾಲೇಜು, ತುಮಕೂರು

**ಸಾರಾಂಶ: (Abstract)**

*ಭಾರತದ ಸಾಂಸ್ಕೃತಿಕ ಚರಿತ್ರೆಯಲ್ಲಿ ದೇವತೆಗಳು, ದೇವಾಲಯಗಳು ಪ್ರಧಾನ ಪಾತ್ರವನ್ನು ವಹಿಸುತ್ತವೆ. ಭಾರತ ವಿವಿಧ ಧರ್ಮಗಳ ನೆಲೆಯಾಗಿದೆ. ಈ ಹಿನ್ನೆಲೆಯಲ್ಲಿ ಹಿಂದೂಧರ್ಮ ಆಚರಣೆಗಳಲ್ಲಿ ಹಲವಾರು ಶಿಷ್ಟ ಮತ್ತು ಗ್ರಾಮದೇವತೆಗಳನ್ನು ಕಾಣುತ್ತೇವೆ. ಸಾಮಾನ್ಯವಾಗಿ ಬಹುಮಟ್ಟಿಗೆ ಶಕ್ತಿ ದೇವತೆಗಳಲ್ಲಿ ಹೆಚ್ಚಿನ ಗ್ರಾಮದೇವತೆಗಳಾಗಿ ಆರಾಧಿಸುತ್ತೇವೆ. ಈ ಗ್ರಾಮದೇವತೆಗಳಲ್ಲಿ ಚೌಡಮ್ಮ, ಸಸ್ತಲಮ್ಮ, ದುರ್ಗಮ್ಮ, ಮುತ್ಯಾಲಮ್ಮ ಹಾಗೂ ಮಾರಿಕಾಂಬಾ ದೇವತೆಗಳನ್ನು ಪೂಜಿಸುತ್ತೇವೆ. ಇಂತಹ ಗ್ರಾಮದೇವತೆಗಳಲ್ಲಿ ಶಿರಶಿಯ ಮಾರಿಕಾಂಬಾ ದೇವತೆಯು ಒಬ್ಬರು. ಈ ಲೇಖನದಲ್ಲಿ ಶಿರಶಿಯ ಸ್ಥಳನಾಮ ಮಾರಿಕಾಂಬಾ ದೇವತೆಯ ಪೂಜಾ ವಿಧಾನ, ಉತ್ಸವ, ಜಾತ್ರೆಯ ಆಚರಣೆಗಳನ್ನು ದಾಖಲಿಸಲಾಗಿದೆ.*

**ಮುಖ್ಯಪದಗಳು (Keywords):** ನಂಬಿಕೆ ಮತ್ತು ಆಚರಣೆಗಳು, ಗ್ರಾಮದೇವತೆ, ಶಕ್ತಿದೇವತೆ, ಮಾತೃದೇವತಾರಾಧನೆ, ಶಿರಶಿ, ಶ್ರೀ ಮಾರಿಕಾಂಬಾ.

## ಪೀಠಿಕೆ

ಶಿರಶಿ ಭಾರತದ ಕರ್ನಾಟಕ ರಾಜ್ಯದ ಉತ್ತರ ಕನ್ನಡ ಜಿಲ್ಲೆಯ ಒಂದು ತಾಲೂಕಾಗಿದೆ. ಇದು ಸಮುದ್ರಮಟ್ಟದಿಂದ 1860 ಅಡಿಗಳಿಂದ 2600 ಅಡಿಗಳ ಎತ್ತರವನ್ನು ಹೊಂದಿದೆ ಮತ್ತು ಪಶ್ಚಿಮ ಘಟ್ಟಗಳ ಹೃದಯ ಭಾಗದಲ್ಲಿರುವ ಶಿರಶಿಯು ಬೆಂಗಳೂರಿನಿಂದ 399 ಕಿ.ಮೀ. ದೂರದಲ್ಲಿದೆ. ಹುಬ್ಬಳ್ಳಿ ವಿಮಾನ ನಿಲ್ದಾಣ 104 ಕಿ.ಮೀ ಮತ್ತು ಬೆಳಗಾವಿ ವಿಮಾನ ನಿಲ್ದಾಣ 190 ಕಿ.ಮೀ. ದೂರದಲ್ಲಿದೆ. ಅಘನಾಶಿನಿ ನದಿಯು ಶಿರಶಿಯ ಬಳಿ **"ಶಂಕರ ಹೊಂಡ"** ಎಂಬ ಸ್ಥಳದಲ್ಲಿ ಪ್ರಾರಂಭವಾಗುತ್ತದೆ. ಮತ್ತು ಪಶ್ಚಿಮದಲ್ಲಿ ಅರಬ್ಬಿ ಸಮುದ್ರದ ಕಡೆಗೆ ಹರಿಯುತ್ತದೆ. ನದಿಯು ತನ್ನ ಹಾದಿಯಲ್ಲಿ ಅನೇಕ ಜಲಪಾತಗಳನ್ನು ಸೃಷ್ಟಿಸಿ ಶಿರಶಿಯ ಸೌಂದರ್ಯವನ್ನು ಇನ್ನೂ ಹೆಚ್ಚಿಸಿದೆ.

## ಶಿರಸಿಯ ಸ್ಥಳನಾಮ ಮತ್ತು ಚರಿತ್ರೆ

ಇಂದು ಶಿರಸಿಯು ಉತ್ತರ ಕನ್ನಡ ಜಿಲ್ಲೆಯಲ್ಲಿಯೇ ಒಂದು ಪ್ರಮುಖ ವ್ಯಾಪಾರ, ವಾಣಿಜ್ಯ, ಉದ್ಯಮ, ಕೃಷಿ ಮತ್ತು ಶಿಕ್ಷಣ ಇವುಗಳ ಕೇಂದ್ರವಾಗಿದೆ. ಶಿರಸಿಯ ಸ್ಥಳನಾಮವನ್ನು ಹುಡುಕಿದಾಗ

ಸಿದ್ದಾಪುರ ತಾಲೂಕಿನ ತಮಡಿ ಕಲ್ಲಾಳದಲ್ಲಿ ದೊರೆತ ವೀರಗಲ್ಲಿನ ಮೇಲೆ ಕೆತ್ತಿದ ಶಾಸನದಲ್ಲಿ 'ಸಿರಿಸೆ" ಎಂದು ಕಾಣಿಸಲಾಗಿದ್ದು ಅಲ್ಲಿ ಯುದ್ಧ ಜರುಗಿತು ಎಂದು ಉಲ್ಲೇಖಿಸಲಾಗಿದೆ ಕ್ರಿಶ.1800–1801 ರಲ್ಲಿ ಈಗಿನ ಉತ್ತರಕನ್ನಡ ಜಿಲ್ಲೆಯಲ್ಲಿ ಪ್ರವಾಸ ಕೈಗೊಂಡಿದ್ದ ಬುಕಾನನ್ ಸೆರ್ಸಿ ಒಂದು ಸಣ್ಣ ಹಳ್ಳಿ, ಆದರೆ ಅದು ಸೋಂದಾದ ತಹಶೀಲ್ದಾರನಿರುವ ಸ್ಥಳ ಎಂದು ಉಲ್ಲೇಖಿಸಲಾಗಿದೆ.[1]

1859ರಲ್ಲಿ ಸೋಂದಾದಿಂದ ಶಿರಸಿಗೆ ತಾಲೂಕು ಸ್ಥಳವನ್ನು ಸ್ಥಳಾಂತರಿಸಲಾಯಿತು. ಅಂದರೆ ಶಿರಸಿ ಒಂದು ತಾಲೂಕಾಗಿ ಮತ್ತು ನಗರವಾಗಿ ಬೆಳೆಯಲು ಪ್ರಾರಂಭವಾಗಿದ್ದು ಹತ್ತೊಂಬತ್ತನೆಯ ಶತಮಾನದಿಂದೀಚೆಗೆಂದೇ ಹೇಳಬೇಕು. ಈಗಿನ ಶಿರಸಿ ತಾಲೂಕಿನಲ್ಲಿರುವ 'ಬನವಾಸಿ' ಹಾಗೂ ಸ್ವಾದಿ' ಪ್ರದೇಶಗಳು ಕರ್ನಾಟಕದ ಪ್ರಸಿದ್ಧ ಐತಿಹಾಸಿಕ ಸ್ಥಳಗಳು  ತಾಲೂಕಿನ ಐತಿಹಾಸಿಕ ಘಟನೆಗಳ ಸಿಂಹಾವಲೋಕನದಿಂದ ಗಮನಿಸಬೇಕಾದ ಮುಖ್ಯ ಅಂಶವೆಂದರೆ ಈ ತಾಲೂಕಿನಲ್ಲಿಯ ಪ್ರದೇಶಗಳು ಬೇರೆ ಬೇರೆ ಕಾಲ ಘಟ್ಟದಲ್ಲಿ ಬೇರೆ ಬೇರೆ ಅರಸು ಮನೆತನಗಳ ಅಧಿಪತ್ಯಕ್ಕೆ ಒಳಪಟ್ಟಿದ್ದವು. ಕ್ರಿ.ಶ. ಪೂರ್ವದಲ್ಲಿ ಮೌರ್ಯರು ಮತ್ತು ಕ್ರಿ ಶ ಒಂದು ಮತ್ತು ಎರಡನೇ ಶತಮಾನದಲ್ಲಿ ಶಾತವಾಹನರು ತಮ್ಮ ಪ್ರಭುತ್ವವನ್ನು ಸ್ಥಾಪಿಸಿದರು.ಎರಡನೇ ಶತಮಾನದಿಂದ ಮೂರನೇ ಶತಮಾನದವರೆಗೆ ಶಾತವಾಹನರ ಶಾಖೆಯವರಾದ ಚುಟುವಂಶಜರು ಆಳಿದ ನಂತರ ಬನವಾಸಿ ಪ್ರದೇಶವು ಕಂಚಿಯ ಪಲ್ಲವರಿಂದ ಆಳಲ್ಪಟ್ಟಿತು, ನಂತರದಲ್ಲಿ ಚಕ್ರಾಧಿಪತ್ಯವನ್ನು ಸ್ಥಾಪಿಸಿದವರೆಂದರೆ ಕದಂಬರು ಬನವಾಸಿ ಕದಂಬರ ಆಳ್ವಿಕೆ ಕ್ರಿ. ಶ. ಮೂರನೇ ಶತಮಾನದಿಂದ ಆರನೇ ಶತಮಾನದವರೆಗೆ ಆಳಿದರು. ಬನವಾಸಿ ಕದಂಬರನ್ನು ಬಾದಾಮಿ ಚಾಲುಕ್ಯರು ಸೋಲಿಸಿ, ಈ ನಾಡನ್ನು ತಮ್ಮ ಅಧೀನದಲ್ಲಿರಿಸಿಕೊಂಡರು ಮಂಗಳೂರಿನ ಆಳೂಪರನ್ನು ಪರಾಭವಗೊಳಿಸಿದ ಎರಡನೇ ಪುಲಕೇಶಿಯು ಬನವಾಸಿ ಮಂಡಲವನ್ನು ಆಳಲು ಆಳೂಪರನ್ನು ನಿಯಮಿಸಿದನು ಮುಂದೆ ಉತ್ತರ ಕನ್ನಡ ಜಿಲ್ಲೆಯ ಬಹುಭಾಗವನ್ನು ವ್ಯಾಪಿಸಿದ್ದ ಬನವಾಸಿ 12000 ಪ್ರಾಂತವನ್ನು ರಾಷ್ಟ್ರಕೂಟರು ವಶಪಡಿಸಿಕೊಂಡು ತಮ್ಮ ಆಡಳಿತವನ್ನು ವಿಸ್ತರಿಸಿದರು. ಹತ್ತು ಹನ್ನೊಂದು ಮತ್ತು ಹನ್ನೆರಡನೇ ಶತಮಾನದ ಶಿರಸಿ ತಾಲೂಕಿನಲ್ಲಿ ದೊರೆತ ಹಾನಗಲ್ಲಿನ ಕದಂಬರ ಮತ್ತು ಕಲ್ಯಾಣ ಚಾಲುಕ್ಯರ ಶಾಸನಗಳು ಅವರ ಪ್ರಭುತ್ವವನ್ನು ಸೂಚಿಸುತ್ತವೆ. ಹದಿನಾಲ್ಕನೇ ಶತಮಾನದ ಮಧ್ಯದವರೆಗೆ ವಿಜಯನಗರ ಸಾಮ್ರಾಟರ ಮಾಂಡಲೀಕರಾದ ಸೋಂದಾದ ನಾಯಕರು ಶಿರಸಿ ಪ್ರಾಂತವನ್ನು ಗೌರವಯುತವಾಗಿ ಆಳಿದರು. ಈ ಪ್ರದೇಶವನ್ನು ನಾಯಕರು ಸು. ಕ್ರಿಶ 1400 ರಿಂದ 1764 ರವರೆಗೆ ಆಳಿದರು. ಹದಿನೇಳು ಮತ್ತು ಹದಿನೆಂಟನೇ ಶತಮಾನಗಳಲ್ಲಿ ವಿಜಾಪುರದ ಸುಲ್ತಾನರು, ಮರಾಠರು ಹಾಗೂ ಮೊಘಲರು ಉತ್ತರ ಕನ್ನಡ ಜಿಲ್ಲೆಯ ಬಹುಭಾಗಗಳನ್ನು ತಮ್ಮ ಹಿಡಿತದಲ್ಲಿರಿಸಿಕೊಂಡರು.

ಭಾಷಾವಾರು ಪ್ರಾಂತ ರಚನೆಯನ್ವಯ 1956 ರಲ್ಲಿ ಮೈಸೂರು ರಾಜ್ಯವು ಅಸ್ತಿತ್ವಕ್ಕೆ ಬಂದಾಗ ಮುಂಬಯಿ ಪ್ರಾಂತದಲ್ಲಿ ವಿಲೀನಗೊಂಡ ಬಿಜಾಪುರ, ಬೆಳಗಾವಿ, ಧಾರವಾಡ ಮತ್ತು ಉತ್ತರ ಕನ್ನಡ ಜಿಲ್ಲೆಗಳನ್ನು ಮೈಸೂರು ರಾಜ್ಯಕ್ಕೆ ಸೇರಿಸಲಾಯಿತು. 1977ರಲ್ಲಿ 'ನಾರ್ತ್ ಕೆನರಾ' ಎಂಬ ಹೆಸರಿನ ಬದಲಾಗಿ ಉತ್ತರಕನ್ನಡ ಎಂದು ಹೆಸರಿಸಲಾಯಿತು. ಶಿರಸಿ ತಾಲೂಕಿನ ಪ್ರದೇಶಗಳು ಕಾಲಕಾಲಕ್ಕೆ ಬೇರೆ ಬೇರೆ

[1] ಏ.ಕೆ. ಶಾಸ್ತ್ರಿ . ಶಿರಸಿ ತಾಲ್ಲೂಕಿನ ಐತಿಹಾಸಿಕ ಆಕರಗಳು.

ಅರಸುಗಳ ಆಡಳಿತಕ್ಕೆ ಒಳಪಟ್ಟಿದ್ದರಿಂದ, ಗಡಿ ವಿಷಯದಲ್ಲಿಯೂ ಪ್ರಸರಣ–ಅಕುಂಚನ ಹೊಂದಿದ್ದನ್ನು ಗಮನಿಸಬಹುದು. ತಾಲೂಕಿನ ಒಳ ಹಾಗೂ ಹೊರವಲಯಗಳಲ್ಲಿ ವಿಫುಲವಾಗಿ ದೊರೆತ ಹಾಗೂ ಕಂಡುಬಂದ ಶಿಲಾಶಾಸನ, ತಾಮ್ರಸಾಸನ, ಕೋಟೆ, ದೇವಸ್ಥಾನ, ಮಠ, ಬೌದ್ಧ ಚೈತ್ಯಾಲಯ, ಜೈನಬಸದಿ, ಮಸೀದಿ, ಇಗರ್ಜಿ, ತಟಾಕ, ವೀರಗಲ್ಲು, ಮಹಾಸತಿಕಲ್ಲು, ನಾಣ್ಯ, ತಾಳೆಗರಿ, ವಿದೇಶಿ ಪ್ರವಾಸಿಗಳ ಕಥನ, ಕಾಗದ ಪತ್ರ, ಸಂಪ್ರದಾಯ ಮತ್ತು ಐತಿಹ್ಯಗಳು ಮಹತ್ವದ ಇತಿಹಾಸ ಸಾಮಗ್ರಿಗಳಾಗಿವೆ.[2]

**ಶ್ರೀ ಮಾರಿಕಾಂಬಾ ದೇವಾಲಯ ಮತ್ತು ಮಾರಿಕಾಂಬ ಇತಿಹಾಸ**

ಶಿರಸಿಯ ಶ್ರೀ ಮಾರಿಕಾಂಬೆ ಕನ್ನಡ ನಾಡಿನ ಪ್ರಮುಖ ಶಕ್ತಿ ದೇವತೆಗಳಲ್ಲಿ ಒಂದಾಗಿದ್ದು ದಕ್ಷಿಣ ಭಾರತದಲ್ಲಿಯೇ ಪ್ರಖ್ಯಾತಿ ಹೊಂದಿದ್ದಾಳೆ. ನಮ್ಮ ದೇಶದಲ್ಲಷ್ಟೇ ಅಲ್ಲದೇ ಪ್ರಪಂಚದಾದ್ಯಂತ ಮಾತೃದೇವತಾರಾಧನೆಯು ಅತ್ಯಂತ ಪ್ರಾಚೀನವಾದುದು. ನಮ್ಮ ದೇಶದ ಪ್ರತೀ ಭಾಗದಲ್ಲಿಯೂ ಒಂದಲ್ಲ ಒಂದು ರೀತಿಯಲ್ಲಿ ಮಾತೃದೇವತಾರಾಧನೆ ಪ್ರಮುಖವಾಗಿ ಕಂಡುಬರುತ್ತದೆ. ಶಿರಸಿಯ ಮಾರಿಕಾಂಬೆಯೂ ಕೂಡ ಮಲೆನಾಡಿನ ನೈಸರ್ಗಿಕ ಸಿರಿಯನ್ನು ಹೊಂದಿರುವ ಶಿರಸಿಯ ಜನರಿಗೆ ಅಚ್ಚುಮೆಚ್ಚಿನ ಮಾತೃದೇವತೆ ಮತ್ತು ಶಕ್ತಿದೇವತೆಯಾಗಿದ್ದಾಳೆ. ಶ್ರೀ ಮಾರಿಕಾಂಬೆಯ ಭಕ್ತ ಸಮೂಹ ಕರ್ನಾಟಕದಲ್ಲಷ್ಟೇ ಅಲ್ಲ ನೆರೆಯ ಕೇರಳ, ತಮಿಳುನಾಡು, ಆಂಧ್ರಪ್ರದೇಶ, ಗೋವಾ, ಮಹಾರಾಷ್ಟ್ರದ ಕೊಲ್ಲಾಪುರ ಹಾಗೂ ಮುಂಬಯಿಯವರೆಗೂ ಹರಡಿಕೊಂಡಿದೆ. ಸಂತೋಷ ಹಾಗೂ ಸಮೃದ್ಧಿಯ ದೇವತೆಯಾದ ಶ್ರೀ ಮಾರಿಕಾಂಬೆ ಪ್ರಪಂಚದ ರಕ್ಷಕಳೆಂಬ ನಂಬಿಕೆ ಆಕೆಯ ಭಕ್ತಾದಿಗಳದ್ದು, ಆದಿಶಕ್ತಿ, ಮಹೇಶ್ವರಿ, ಕಾತ್ಯಾಯಿನಿ, ಜಗದಂಬೆ, ಈಶ್ವರಿ, ಚಾಮುಂಡಿ, ಮಹಿಷಾಸುರಮರ್ಧಿನಿ ಮುಂತಾದ ವಿವಿಧ ಹೆಸರುಗಳಿಂದ ಪೂಜೆಗೊಳ್ಳುವ ಈ ದುರ್ಗೆ ಸತ್ಯ. ರಜ, ತಮೋ ಗುಣಗಳ ಸಂಕೇತಗಳಾದ ಮಹಾಸರಸ್ವತಿ, ಮಹಾಲಕ್ಷ್ಮಿ, ಮಹಾಕಾಳಿಯಾಗಿಯೂ ರೂಪಾಂತರಗೊಂಡರು. ಸಾಂಕ್ರಾಮಿಕ ರೋಗಗಳು, ಕ್ಷಾಮ, ಸಾವು ನೋವುಗಳು ಸಂಭವಿಸಿದಾಗ ಜಾತಿ, ಮತಭೇದಗಳಿಲ್ಲದೆ ಸರ್ವರೂ ಈ ದೇವತೆಗೆ ಶರಣಾಗುತ್ತಾರೆ. ಹಳ್ಳಿಯ ಜನಸಾಮಾನ್ಯರು ಈ ದೇವತೆಯನ್ನು ಶಿರಸಿಯಮ್ಮ ಮಾರಿಯಮ್ಮ ದುರ್ಗಮ್ಮ, ಶಿವಮ್ಮ ದೊಡ್ಡಮ್ಮ ಎಂದು ಮುಂತಾಗಿ ಕರೆದು ತಮ್ಮ ದೈವಾನುಗ್ರಹವನ್ನು ಪಡೆಯುತ್ತಾರೆ. ಜನರನ್ನು ಕಾಡುವ ದುಷ್ಟರು, ಭೂತ, ಪಿಶಾಚಿಗಳ ಮೇಲೆ ದೇವಿ ಕೆರಳಿ, ಮುನಿದು ಮಾರಿಯಾದರೆ ಸಜ್ಜನರ ಭಕ್ತಿಗೆ ಒಲಿದು ಪ್ರೀತಿಯ ರಸಧಾರೆಯನ್ನುಣಿಸುವ ಅಮ್ಮನಾಗುತ್ತಾಳೆ. ಶಿರಸಿಯ ಸೀಮೆಗೆ ಗಾಳಿಮಾರಿಯಾಗಿ ಬಂದ ಈಕೆ ಇಂದು ಶಿರಸಿಯ ಶಿವಮ್ಮನಾಗಿ ಭಕ್ತರ ಅಭೀಷ್ಟೆಗಳನ್ನು ಪೂರೈಸುವ, ಕಷ್ಟಗಳ ಸಂದರ್ಭಗಳಲ್ಲಿ ರಕ್ಷಿಸುವ ದೇವತೆಯಾಗಿದ್ದಾಳೆ. ಹೀಗೆ ಶ್ರೀ ಮಾರಿಕಾಂಬೆಯಲ್ಲಿ ಜಾನಪದ ಮಾರಿ–ಅಮ್ಮ ಹಾಗೂ ವೈದಿಕ ಶಕ್ತಿದೇವತೆಯ ಸಮನ್ವಯ ಸ್ವರೂಪವನ್ನು ಕಂಡುಕೊಳ್ಳಬಹುದಾಗಿದೆ.[3]

ಸುಮಾರು ಮುನ್ನೂರು ವರ್ಷಗಳ ಹಿಂದೆ ಶ್ರೀ ಮಾರಿಕಾಂಬೆ ಶಿರಸಿಗೆ ಆಗಮಿಸುವ ಪೂರ್ವದಲ್ಲಿ ಮರ್ಕಿ, ದುರ್ಗೆಯರೆಂಬ ಜೋಡು ದೇವತೆಗಳನ್ನು ಶಿರಸಿಯ ಜನ ಆರಾಧಿಸುತ್ತಿದ್ದರು. ಇಂದೂ ಈ

[2] ಎ.ಕೆ. ಶಾಸ್ತ್ರಿ. ಶಿರಸಿ ತಾಲೂಕಿನ ಐತಿಹಾಸಿಕ ಆಕರಗಳು.

[3] ಎನ್. ಆರ್. ನಾಯಕ್. ಶಿರಸಿಯ ಶ್ರೀಮಾರಿಕಾಂಬೆ ಮತ್ತು ಜಾತ್ರೆ.

ಮರ್ಕಿ, ದುರ್ಗಿಯರ ದೇವಾಲಯ ಶಿರಸಿಯಲ್ಲಿದೆ. ಶ್ರೀ ಮಾರಿಕಾಂಬೆಯ ಜಾತ್ರೆಯ ಸಮಯಕ್ಕೆ ಬೇವಿನುಡಿಗೆಯ ಸೇವೆ ನಡೆಯುವುದು ಇವುಗಳ ಸನ್ನಿಧಿಯಲ್ಲಿಯೇ ಶಿರಸಿಯ ರೈತಾಪಿ ಜನ ಈ ದೇವತೆಗಳಿದ್ದರೂ ಚಂದ್ರಗುತ್ತಿಯ ರೇಣುಕೆಯನ್ನೇ ತಮ್ಮ ಗ್ರಾಮದೇವತೆಯೆಂದು ಪರಿಗಣಿಸುತ್ತಿದ್ದರು ಅಸಾದಿಗಳು ಸುಗ್ಗಿಯ ಕಾಲದಲ್ಲಿ ಮರ್ಕಿ, ದುರ್ಗೆಯರ ಪಡಲಿಕೆಯನ್ನು ಹೊತ್ತು ಊರ ಮೇಲೆ ಸುತ್ತಾಡಿ ಭಕ್ತರ ಹರಕೆಗಳನ್ನು ಸ್ವೀಕರಿಸಿ ಅವರಿಗೆ ಶ್ರೀ ದೇವಿಯ ಭಂಡಾರವನ್ನು ನೀಡುತ್ತಿದ್ದರು. ಇಂದಿನ ಪ್ರಖ್ಯಾತ ಮಾರಿಕಾಂಬೆಯ ವಿಗ್ರಹವಾಗಲಿ ದೇವಾಲಯವಾಗಲಿ ಇರಲಿಲ್ಲ.

ಶ್ರೀ ಮಾರಿಕಾಂಬೆ ದೇವಾಲಯವನ್ನು ವಿಜಯನಗರದ ಅರಸರ ಸಾಮಂತರಾಗಿದ್ದ ಸೋದೆ ಅರಸ ಸದಾಶಿವರಾಯನು 1689 ರಲ್ಲಿ ನಿರ್ಮಿಸಿದ ಎನ್ನಲಾಗಿದೆ. ಒಂದು ಐತಿಹ್ಯದ ಪ್ರಕಾರ ಅಂದಿನ ವಿರಾಟನಗರವಾಗಿದ್ದ ಈಗಿನ ಹಾನಗಲ್ಲಿನಲ್ಲಿ ಧರ್ಮರಾಯನು ದೇವಿಯನ್ನು ಆರಾಧಿಸುತ್ತಿದ್ದನು ಎಂದು ಮಹಾಭಾರತದಲ್ಲಿ ಹೇಳಲಾಗಿದೆ. ಚಾಲುಕ್ಯರ ಕಾಲದ ಶಾಸನದಲ್ಲಿ ಕೂಡ ಇದರ ಉಲ್ಲೇಖವಿದೆ. ಹಾನಗಲ್ಲಿನಲ್ಲಿ ಜಾತ್ರೆ ಮುಗಿದ ನಂತರ ಆಭರಣಗಳ ಸಮೇತವಾಗಿ ದೇವಿಯನ್ನು ಒಂದು ಪೆಟ್ಟಿಗೆಯಲ್ಲಿ ಹಾಕಿ ಇಟ್ಟಿದ್ದರು ಅದನ್ನು ಕೆಲವು ಕಳ್ಳರು ಅಪಹರಿಸಿ ಶಿರಸಿಗೆ ತಂದರು ಆಭರಣಗಳನ್ನು ಹಂಚಿಕೊಂಡ ನಂತರ ಆ ವಿಗ್ರಹವನ್ನು ಪೆಟ್ಟಿಗೆಯಲ್ಲಿಟ್ಟು ಕೆರೆಗೆ ಎಸೆದರು ಆ ಕೆರೆಯು ಶಿರಸಿಯ ದೇವಿಕೆರೆ ಎಂದು ಹೆಸರಾಗಿದೆ.

ಭಕ್ತನೊಬ್ಬ ಪ್ರತಿವರ್ಷ ಚಂದ್ರಗುತ್ತಿಯ ಜಾತ್ರೆಗೆ ಹೋಗುತ್ತಿದ್ದ. ಆದರೆ ಒಂದು ಬಾರಿ ಅವನನ್ನು ಜನರು ತಡೆದು ಪೀಡಿಸಿದರು ಅದರಿಂದ ಬೇಸರಗೊಂಡು ಅವನು ಮುಂದಿನ ವರ್ಷ ಜಾತ್ರೆಗೆ ಹೋಗದೆ ಶಿರಸಿಯಲ್ಲಿಯೇ ದೇವಿಯ ಆರಾಧನೆ ಮಾಡಿದನು. ಒಂದು ರಾತ್ರಿ ದೇವಿ ಅವನಿಗೆ "ನಾನು ಮಾರಮ್ಮ, ನಾನು ನಿಮ್ಮ ಊರಿನ ಕೆರೆಯಲ್ಲಿದ್ದೇನೆ ನನ್ನನ್ನು ಮೇಲೆತ್ತು' ಎಂದು ಹೇಳಿದಂತೆ ಕನಸು ಬಿತ್ತು. ಅವನು ಅದನ್ನು ಆ ಊರಿನ ಪ್ರಮುಖರಿಗೆ ತಿಳಿಸಿದನು. ಅದರಂತೆ ಊರವರು ಕೆರೆಯ ಸುತ್ತ ಸೇರಲಾಗಿ ಭಕ್ತನು ಮೂರು ಸುತ್ತು ಕೆರೆಯನ್ನು ಸುತ್ತಿ ದೇವಿಯನ್ನು ಪ್ರಾರ್ಥಿಸಿದರು. ಕೆರೆಯ ಮೇಲೆ ತೇಲುತ್ತಿರುವ ಪೆಟ್ಟಿಗೆಯು ಕಂಡು ಬಂದಿತು. ಅದರಲ್ಲಿನ ವಿಗ್ರಹದ ಭಾಗಗಳನ್ನು ಒಟ್ಟು ಸೇರಿಸಲಾಗಿ ದೇವಿಯ ವಿಗ್ರಹವು ಮೂಡಿಬಂದಿತು. ಗ್ರಾಮಸ್ಥರು ದೇವಿಯ ವಿಗ್ರಹವನ್ನು ಶಿರಸಿಯಲ್ಲಿ ಸ್ಥಾಪಿಸಲು ಅನುಮತಿ ಕೋರಿ ಸೋಂದಾ(ಸೋದೆ) ಸಂಸ್ಥಾನದ ಮಹಾರಾಜರನ್ನು ಕೇಳಿದರು ಅದರಂತೆ ಕ್ರಿ.ಶ. 1689 ರಲ್ಲಿ ಅಂದರೆ ಶಾಲಿವಾಹನ ಶಕೆ 1611ರ ಶುಕ್ಲಸಂವತ್ಸರದ ವೈಶಾಖ ಶುದ್ದ ಅಷ್ಟಮಿಯಂದು ಮಂಗಳವಾರ ದೇವಿಯನ್ನು ಪ್ರತಿಷ್ಠಾಪಿಸಲಾಯಿತು.

ಶ್ರೀ ಮಾರಿಕಾಂಬೆಯನ್ನು ಕುರಿತು ಜನಜನಿತವಾದ ಇನ್ನೊಂದು ಐತಿಹ್ಯವಿದೆ. ವೇದಾಧ್ಯಯನವನ್ನು ಬ್ರಾಹ್ಮಣೇತರರು ಮಾಡುವುದನ್ನು ನಿಷೇಧಿಸಿದ ಕಾಲದಲ್ಲಿ ಭಂಡಾಯ ಮನೋಭಾವನೆಯ ಉತ್ಸಾಹಿ ಹೊಲೆಯರ ಹುಡುಗನೊಬ್ಬ ವೇದವಿದ್ಯೆಯನ್ನು ಕಲಿತು ಪಾಂಡಿತ್ಯವನ್ನು ಪಡೆಯಲು ಆಶಿಸಿದ ಆದರೆ ಹೆಂಗಸರು, ಶೂದ್ರಾದಿಗಳು ವೇದ ವಿದ್ಯೆಯನ್ನು ಕಲಿಯಲು ಅವಕಾಶವಿಲ್ಲದಾಗ ಪಂಚಮನಿಗೆ ಅದು ದೊರಕುವುದಾದರೂ ಹೇಗೆ? ಆದರೆ ಜ್ಞಾನದಾಹಿಯಾದ ಹೊಲೆಯರ ಹುಡುಗ ವೇದಾಧ್ಯಯನದ ಕಲಿಯಬೇಕೆಂಬ ಬಯಕೆಯನ್ನು ನಿಗ್ರಹಿಸಲಾಗದೇ ಬ್ರಾಹ್ಮಣ ವಟುವೇಷವನ್ನು ತೊಟ್ಟು, ಬ್ರಾಹ್ಮಣ

ಗುರುವೊಬ್ಬನ ಮೂಲಕ ವೇದಾಧ್ಯಯನ ಮಾಡಿ ವೇದ ಪಾರಂಗತನಾದ. ಅವನ ಚುರುಕು ಬುದ್ದಿ, ಉತ್ಸಾಹಶೀಲತೆ, ಸಭ್ಯ ನಡತೆಗೆ ಮನಸೋತ ಬ್ರಾಹ್ಮಣ ಗುರು ಆತನನ್ನು ಬ್ರಾಹ್ಮಣನೆಂದು ತಿಳಿದು ತನ್ನ ಮಗಳನ್ನು ಮದುವೆ ಮಾಡುತ್ತಾನೆ. ಕೆಲವು ವರ್ಷಗಳ ನಂತರ ಮಕ್ಕಳೂ ಆದರು. ಹೊಲೆಯರ ಹುಡುಗ ತನ್ನ ಉದರಂಭರಣೆಗಾಗಿ ಮೆಟ್ಟು ಹೊಲೆಯುವ ತನ್ನ ಕುಲಕಸುಬನ್ನು ಹೆಂಡತಿಗೆ ತಿಳಿಯದ ರೀತಿಯಲ್ಲಿ ಮಾಡುವುದರ ಜೊತೆಗೆ ತನ್ನ ಪೂರ್ವದ ಮಾಂಸ ಸೇವನೆಯ ಚಟವನ್ನು ಹೊಂದಿದ್ದ ತನ್ನ ಮಕ್ಕಳಿಗೂ ಅದರ ರೂಢಿ ಮಾಡಿಸಿದ್ದ.[4]

ಒಮ್ಮೆ ತನ್ನ ಮಗು ಊಟವನ್ನು ಮಾಡುವಾಗ ಪದಾರ್ಥದಲ್ಲಿಯ ಕುಂಬಳಕಾಯಿಯ ಹೋಳನ್ನು ನೋಡಿ ಇದು ಯಾವ ಮಾಂಸದ ಹೋಳಮ್ಮ? ಎಂದು ಪ್ರಶ್ನಿಸಿದಾಗ ಗಂಡನ ವಿಷಯದಲ್ಲಿ ಹೆಂಡತಿ ಅನುಮಾನ ತಾಳಿದಳು. ಗಂಡನ ಚಲನವಲನಗಳನ್ನು ರಹಸ್ಯವಾಗಿ ಪರೀಕ್ಷಿಸಿ ಅವನ ಹೊಲೆತನದ ಹೆಜ್ಜೆಗುರುತುಗಳನ್ನು ಕಂಡು ಕೆರಳಿದಳು. ಏನು ಮಾಡಬೇಕೆಂದು ತಿಳಿಯದೆ ನೇರವಾಗಿ ತಂದೆಯ ಬಳಿ ಬಂದು ನಾಯಿ ಮುಟ್ಟಿದ ಗಡಿಗೆಯನ್ನು ಏನುಮಾಡಬೇಕೆಂದು ಕೇಳಿದಳು ಪೂರ್ವಾಪರವನ್ನರಿಯದ ಅವಳ ತಂದೆ ಮಗಳನ್ನು ಕುರಿತು "ಅದನ್ನು ಸುಟ್ಟು ಶುದ್ಧಗೊಳಿಸು' ಎಂದು ತಿಳಿಸುತ್ತಾನೆ. ತಂದೆಯ ಮಾತಿನಿಂದ ಪ್ರೇರಣೆಯನ್ನು ಪಡೆದ ನಾರಿ ತನ್ನನ್ನು ಸುಟ್ಟುಕೊಳ್ಳುವ ನಿರ್ಧಾರಕ್ಕೆ ಬಂದು ಮನೆಗೆ ಹಿಂದಿರುಗಿದಳು ತನ್ನ ಈವರೆಗಿನ ಮುಗ್ಧತೆಯನ್ನು ಸ್ನೇಹಮಯ ನಾರಿತನವನ್ನು ಮರೆತು ಮುನಿದು ಮಾರಿಯಾದಳು ರಾತ್ರಿಯ ವೇಳೆ ಗಂಡ ಹಾಗೂ ಮಕ್ಕಳು ಸುಖನಿದ್ದೆಯಲ್ಲಿದ್ದಾಗ ಮನೆಗೆ ಕಿಚ್ಚಿಟ್ಟಳು. ಆ ಕಿಚ್ಚಿನಲ್ಲಿ ತಾನೂ ಹಾರಬೇಕೆಂದಿರುವಾಗ ಬೆಂಕಿಯ ಜಳದಿಂದ ಎಚ್ಚೆತ್ತ ಗಂಡ ಮತ್ತು ಮಕ್ಕಳು ದಿಕ್ಕೆಟ್ಟು ಓಡಿದರು. ಆದರೂ ಬಿಡದ ಹೆಂಡತಿ ಅವನನ್ನು ಬೆನ್ನಟ್ಟಿದಳು. ಆಗ ಅವಳ ಗಂಡ ಸಮಯದ ತೀಕ್ಷ್ಣತೆಯನ್ನರಿತು ತಾನು ಕಲಿತ ಪರಕಾಯ ಪ್ರವೇಶ ವಿದ್ಯೆಯನ್ನು ಬಳಸಿ ಹೆಂಡತಿಯ ಕೈಯಿಂದ ತಪ್ಪಿಸಿಕೊಳ್ಳಲು ಕೋಳಿ, ಕುರಿ, ಹಂದಿ, ಕೋಣ, ಹೀಗೆ ಬೇರೆ ಬೇರೆ ರೂಪಗಳನ್ನು ತಾಳಿ ಪ್ರಯತ್ನಿಸಿದರೂ ಆಕೆ ಆ ಎಲ್ಲ ರೂಪಗಳಲ್ಲಿ ಅವನನ್ನು ಸಂಹರಿಸಿ ಚಿತೆಗೆಸೆಯುತ್ತಾಳೆ. ಗಂಡನ ಚಿತೆಗೆ ತಾನೂ ಹಾರಿ ಪ್ರಾಣ ಬಿಡುತ್ತಾಳೆ. ಹೀಗೆ ದೇಹ ಬಲಿದಾನ ಮಾಡಿದ ನಾರಿಯೇ ಮತ್ತೆ ತನಗೆ ಶರಣಾದವರನ್ನು ಕಾಪಾಡುವ ಅಮ್ಮನಾಗಿ, ಸೊಕ್ಕೇರಿ ಮೆರೆಯುವ ಶಿಷ್ಟ ಪೀಡಕರಿಗೆ ಭೂತ, ಪಿಶಾಚಿಗಳಿಗೆ ಭಕ್ತರನ್ನು ಕಾಡುವ ಮಾರಿಯೂ ಆಗಿ ಅವತರಿಸಿ ಮಾರಿಕಾಂಬೆಯೆನಿಸಿಕೊಂಡಳು.

ಮಾರಿಕಾಂಬೆಯನ್ನು ಕುರಿತಾದ ಈ ಐತಿಹ್ಯ ಸಿರಿಸಿಯಲ್ಲಷ್ಟೇ ಅಲ್ಲ ಕರ್ನಾಟಕ, ತಮಿಳುನಾಡು, ಕೇರಳ, ಆಂಧ್ರ ಹೀಗೆ ದಕ್ಷಿಣಭಾರತದುದ್ದಕ್ಕೂ ಸ್ವಲ್ಪ ಭಿನ್ನ ಪಾಠಾಂತರಗಳಿಂದ ಸ್ವಲ್ಪ ಹೆಚ್ಚಕಡಿಮೆ ಒಂದೇ ಬಗೆಯಲ್ಲಿ ಪ್ರಚಲಿತವಿದೆ. ಶಿರಸಿಯ ಒಂದು ವಿಶೇಷವೆಂದರೆ ಮಾರಿಜಾತ್ರೆಯಲ್ಲಿ ಈ ಕಥೆಯನ್ನು ಸತ್ಯ ಘಟನೆಯೇ ಎನ್ನುವ ಬಗೆಯಲ್ಲಿ ಆಚರಣೆಯಲ್ಲಿಯೂ ಉಳಿಸಿಕೊಂಡು ಬರಲಾಗಿದೆ. ಇದರ ವಿವರಣೆಯನ್ನು ಮಾರಿ ಜಾತ್ರೆಯ ಚಡಂಗಗಳ ವಿಶ್ಲೇಷಣೆಯಲ್ಲಿ ಕಾಣಬಹುದು.

[4] ಡಾ.ಎನ್. ಆರ್. ನಾಯಕ್; ಶಿರಸಿಯ ಶ್ರೀಮಾರಿಕಾಂಬೆ ಮತ್ತು ಜಾತ್ರೆ

**ಶ್ರೀ ಮಾರಿಕಾಂಬಾ ಜಾತ್ರೆ**

ಪ್ರತೀ ಎರಡು ವರ್ಷಗಳಿಗೊಮ್ಮೆ ಧಾರ್ಮಿಕ ಪರಂಪರೆಯಂತೆ ಪೂಜಾ ಉತ್ಸವಗಳಿಂದೊಡಗೂಡಿದ ಶ್ರೀ ಮಾರಿಕಾಂಬಾ ಜಾತ್ರೆಯನ್ನು ಅತೀ ವಿಜೃಂಭಣೆಯಿಂದ ನಡೆಸಲಾಗುತ್ತದೆ. ಇದು ಭಾರತದ ಅತಿ ದೊಡ್ಡ ಜಾತ್ರೆಗಳಲ್ಲಿ ಒಂದು, ಈ ಜಾತ್ರೆಗೆ ದೇಶದ ಮೂಲೆ ಮೂಲೆಗಳಿಂದ ಭಕ್ತ ಸಾಗರ ಹರಿದು ಬರುತ್ತದೆ.

**ಜಾತ್ರೆಯ ವಿಧಿ ವಿಧಾನಗಳು**

ಶಿರಸಿ ಜಾತ್ರೆಯು 9 ದಿನಗಳ ಕಾಲ ಜರುಗುವ ಅದ್ದೂರಿ ಜಾತ್ರೆ.ಇಲ್ಲಿ ಜಾತ್ರೆ ಆರಂಭವಾಗುವ ಎರಡು ತಿಂಗಳು ಮೊದಲಿನಿಂದಲೇ ಜಾತ್ರೆಯ ವಿಧಿ ವಿಧಾನಗಳು ಪ್ರಾರಂಭವಾಗುತ್ತವೆ. ಜಾತ್ರೆಯ ಮುಹೂರ್ತ ನಿಶ್ಚಯಿಸಲು ಪುಷ್ಯ ಮಾಸದ ಒಂದು ದಿನ ವಿಶೇಷ ಸಭೆ ಕರೆಯಲಾಗುತ್ತದೆ. ಈ ಸಭೆಯಲ್ಲಿ ಊರಿನ ಗಣ್ಯರು, ಸಾರ್ವಜನಿಕರು, ಬಾಬುದಾರರು, ಧರ್ಮದತ್ತಿಗಳು ಭಾಗವಹಿಸುತ್ತಾರೆ. ಜಾತ್ರೆಯ ದಿನ ನಿಗದಿಯಾದ ನಂತರ ಸಂಪ್ರದಾಯದಂತೆ ಜಾತ್ರೆಯ ಪೂರ್ವದ ಮೂರು ಮಂಗಳವಾರ ಎರಡು ಶುಕ್ರವಾರದ ದಿನಗಳೆಂದು ಐದು ಹೊರಬೀಡುಗಳು ಆಗುತ್ತವೆ.[5]

ಹೊರಬೀಡು ಎಂದರೆ ರಾತ್ರಿ ಗಡಿ ಗದ್ದುಗೆಗಳಿಗೆ ಹೋಗಿ ಜಗನ್ಮಾತೆಯ ಸೇವೆಗೆ ಉಪಯೋಗಿಸುವ ಆಯುಧಗಳು, ವಾದ್ಯಗಳು, ಹಲಗೆ, ದೀವಟಿಗೆ ಮೊದಲಾದವುಗಳನ್ನು ದೇವಿಯ ಎದುರಿಟ್ಟು ಪೂಜಿಸಿ ಪ್ರಾರ್ಥಿಸುವುದು, ಐದು ಹೊರಬೀಡಿನಲ್ಲಿ ಮೂರು ಮಂಗಳವಾರದಂದು ಉತ್ಸವ ಮೂರ್ತಿಯನ್ನು ಪಲ್ಲಕ್ಕಿಯಲ್ಲಿ ಕೂರಿಸಿಕೊಂಡು ಮೆರವಣಿಗೆಯೊಂದಿಗೆ ಪೂರ್ವದಿಕ್ಕಿನ ಕಡೆಗೆ ಹೋದರೆ ಉಳಿದೆರಡು ಶುಕ್ರವಾರ ಪಡಲಿಗೆಯಾ ಉತ್ತರ ದಿಕ್ಕಿನ ಗಡಿಯ ನಿಶ್ಚಿತ ಗದ್ದುಗೆಗೆ ಹೋಗುತ್ತದೆ ಎಲ್ಲ ಹೊರಬೀಡಿನಲ್ಲಿ ರಾತ್ರಿ ಮೆರವಣಿಗೆಗಳು ಶ್ರೀದೇವಿಗೆ ಉಡಿತುಂಬಿದ ನಂತರ ಮರ್ಕಿ ದುರ್ಗಿ ದೇವಸ್ಥಾನಕ್ಕೆ ಹೋಗುವವು ಅಲ್ಲಿ ದೇವತೆಗಳಿಗೆ ಉಡಿ ಸಮರ್ಪಣೆಯಾದ ನಂತರ ಜಾತ್ರೆಯ ಗದ್ದುಗೆಗೆ ಹೋಗಿ ಅಲ್ಲಿ ಹೊರಬೀಡಿಗನುಗುಣವಾಗಿ ಉತ್ಸವ ಮೂರ್ತಿಯನ್ನು ಪಡಲಿಗೆಯನ್ನು ಇಟ್ಟು ಪೂಜಿಸುತ್ತಾರೆ. ಮಂಗಳವಾರದ ಹೊರಬೀಡುಗಳಲ್ಲಿ ಪಲ್ಲಕ್ಕಿಯು ಪೂರ್ವದಿಕ್ಕಿನ ಕೊನೆಯ ಗದ್ದುಗೆಗೆ ಬರುತ್ತದೆ.ನಂತರ ಮೆರವಣಿಗೆಯು ಪುನಃ ಮರ್ಕಿ ದುರ್ಗಿ ದೇವಸ್ಥಾನಕ್ಕೆ ಹೋಗಿ ಪೂಜೆ ಸಲ್ಲಿಸಿ ಮಾರಿಗುಡಿಗೆ ಹೋಗಿ ಪೂಜೆ ನೆರವೇರಿಸಿ ವಿಸರ್ಜನೆಯಾಗುತ್ತದೆ.

ಈ ಜಾತ್ರೆಯಲ್ಲಿ ಅಮ್ಮನವರು ಸವಾರಿ ಮಾಡುವ ರಥವನ್ನು ಕಟ್ಟುವುದು ತುಂಬಾ ವಿಶೇಷ ನಾಲ್ಕನೇ ಹೊರಬೀಡಿನ ಮರುದಿನ ಮಂಗಳ ವಾದ್ಯದೊಂದಿಗೆ ಕಾಡಿಗೆ ಹೋಗಿ ಮೊದಲೇ ನಿಶ್ಚಯಿಸಿದ ತಾರಿ ಮರವನ್ನು ಕಡಿಯುತ್ತಾರೆ. ನಂತರ ಐದನೇ ಹೊರಬೀಡಿನ ದಿನ ಮುಂಜಾನೆ ರಶ್ಮಿ ಮೂಡುವ ಸಮಯದಲ್ಲಿ ಮಂಗಳವಾದ್ಯದೊಂದಿಗೆ ಮೆರವಣಿಗೆಯ ಮುಖಾಂತರ ಮರವನ್ನು ತಂದು ದೇವಾಲಯದ ಎದುರು ಪೂಜೆ ಸಲ್ಲಿಸಲಾಗುತ್ತದೆ. ಜಾತ್ರೆ ಪ್ರಾರಂಭವಾಗುವ ಏಳು ದಿನಗಳ ಮೊದಲೆ ರಥ ಕಟ್ಟಲು ಪ್ರಾರಂಭಿಸುತ್ತಾರೆ. ಬಾಬುದಾರರು, ಬಡಿಗೇರರು, ಆಚಾರಿಗಳು, ಉಪ್ಪಾರರು ರಥ ಕಟ್ಟುವ ಕಾರ್ಯ ಮಾಡುತ್ತಾರೆ.[6]

---

[5] ಕ್ಷೇತ್ರಕಾರ್ಯ: ದಿನಾಂಕ 17/03/2022: ಶಿರಸಿ

[6] ಸಂದರ್ಶನ: ಸ್ಥಳೀಯರು ದಿನಾಂಕ :17/03/2022

ಹೊರಬೀಡಿನ ನಂತರ ಮಾರಿಕೋಣವನ್ನು ಮೆರವಣಿಗೆ ಮುಖಾಂತರ ಮರ್ಕಿ, ದುರ್ಗಿ ದೇವಸ್ಥಾನಕ್ಕೆ ಹೋಗಿ ಪೂಜೆ ಸಲ್ಲಿಸಿ ನಂತರ ಅಲ್ಲಿಂದ ಗದ್ದುಗೆಯತ್ತ ಸಾಗುತ್ತದೆ. ಅಲ್ಲಿ ಅಸಾದಿಯರು ಮತ್ತು ಮೇತ್ರಿಯರು ರಂಗವಿಧಾನ ನೆರವೇರಿಸಿ ಪಟ್ಟದ ಕೋಣಕ್ಕೆ ಕಂಕಣ ಧಾರಣೆ ಮಾಡುತ್ತಾರೆ. ಇದನ್ನು ಅಂಕೆ ಹಾಕುವುದು ಎನ್ನುತ್ತಾರೆ ಅಂಕೆ ಹಾಕಿದ ದಿನ ಅಮ್ಮನವರ ವಿಗ್ರಹ ವಿಸರ್ಜನೆ ಮಾಡಿ ಬಣ್ಣಕ್ಕೆ ಕಳುಹಿಸುವ ಸಂಪ್ರದಾಯ ಇರುತ್ತದೆ. ಜಾತ್ರೆಯ ಗದ್ದುಗೆಯಲ್ಲಿ ನಾಡಿಗೆ ಬಾಬುದಾರರಿಂದ ಮಂಗಳಾರತಿ ನಡೆಯುತ್ತದೆ ಈ ಮಂಗಳಾರತಿಯಿಂದ ಒಂದು ವಿಶೇಷ ಹಣತೆ ಹಚ್ಚುತ್ತಾರೆ. ಈ ಹಣತೆಯನ್ನು ಜಾತ್ರೆ ಮುಗಿಯುವವರೆಗೆ ಶಾಂತವಾಗದಂತೆ ಕಾಯಬೇಕು ಮೇಟಿಯವರು ದೀಪ ಆರದಂತೆ ಕಾಯುವ ಕೆಲಸ ಮಾಡುತ್ತಾರೆ. ಇದನ್ನು 'ಮೇಟಿದೀಪ' ಎನ್ನುತ್ತಾರೆ.

ಅಂಕೆ ಹಾಕಿದ ನಂತರ ಬರುವ ಮೊದಲ ಮಂಗಳವಾರ ಶ್ರೀ ದೇವಿಗೆ ಕಲ್ಯಾಣ ಮಹೋತ್ಸವ ಮಾಡಲಾಗುತ್ತದೆ. ಅದೇ ದಿನ ರಥಕ್ಕೆ ಕಳಸಾರೋಹಣ ನೆರವೇರುತ್ತದೆ. ಶ್ರೀ ದೇವಿಯ ಮದುವೆಯ ಸಮಾರಂಭದಲ್ಲಿ ವಿಶೇಷವಾಗಿ ನಾಡಿಗರು, ಬಾಬುದಾರರು, ಊರಗಣ್ಯರು, ಸಕಲ ಭಕ್ತಾದಿಗಳು ಪಾಲ್ಗೊಳ್ಳುತ್ತಾರೆ. ಶ್ರೀ ದೇವಿಯು ಸರ್ವಾಲಂಕಾರಭೂಷಿತಳಾಗಿ ರಾರಾಜಿಸುತ್ತಿರುತ್ತಾಳೆ ಶ್ರೀ ದೇವಿಯ ಮದುವೆಯ ಸಂಪ್ರದಾಯದಂತೆ ಶ್ರೀ ದೇವಿಗೆ ಮಂಗಳಸೂತ್ರಧಾರಣೆ, ಗುಡಿಗಾರರ ದೃಷ್ಟಿಪೂಜೆ, ನಾಡಿಗರಪೂಜೆ, ಚಕ್ರಸಾಲಿಪೂಜೆ, ಕೇದಾರಿಮನೆತನದಪೂಜೆ ಹಾಗು ಪೂಜಾರಕಪೂಜೆಗಳು ನೆರವೇರುತ್ತವೆ. ಈ ಕಲ್ಯಾಣೋತ್ಸವದಲ್ಲಿ ಘಟ್ಟದ ಕೆಳಗಿನ ಜನರು ಹಾಗು ಬಯಲುಸೀಮೆಯ ಲಂಬಾಣಿ ಜನಾಂಗದ ಜನರು ವಿಶೇಷವಾಗಿ ಮಹಿಳೆಯರು ತಮ್ಮ ಸಂಪ್ರದಾಯ ಉಡುಗೆ ಧರಿಸಿ ನೃತ್ಯ ಮಾಡುವುದು ಮತ್ತು ಸಂಗೀತ ವಾದ್ಯಗಳನ್ನು ನುಡಿಸುವುದು ಮದುವೆಯ ಸಂಭ್ರಮಕ್ಕೆ ಮತ್ತಷ್ಟು ಮೆರಗು ತಂದುಕೊಡುತ್ತದೆ.

ಬುಧವಾರ ಮುಂಜಾನೆ ಶ್ರೀ ದೇವಿಯನ್ನು ರಥದ ಮೇಲೆ ಪ್ರತಿಷ್ಠಾಪನೆ ಮಾಡುವ ಮೊದಲು ದೇವಾಲಯದ ಮುಂಭಾಗದ ಭೂತರಾಜನಿಗೆ ಸಾತ್ವಿಕ ಬಲಿ ಸಮರ್ಪಣೆ ಮಾಡಲಾಗುತ್ತದೆ. ರಥೋತ್ಸವದೊಂದಿಗೆ ಶ್ರೀ ದೇವಿಯ ಶೋಭಾಯಾತ್ರೆ ಅದ್ದೂರಿಯಾಗಿ ಮಾರಿಗುಡಿಯಿಂದ ಊರಮಧ್ಯದ ಬಿಡಕಿಬೈಲಿನ ಜಾತ್ರಾ ಗದ್ದುಗೆಗೆ ಬಂದು ತಲುಪುತ್ತದೆ. ಶ್ರೀ ದೇವಿಯು ಶೋಭಾಯಾತ್ರೆಯಲ್ಲಿ ಬರುವಾಗ ಭಕ್ತರ ಭಕ್ತಿಯ ಪರಾಕಾಷ್ಠೆಯು ತುತ್ತತುದಿಯಲ್ಲಿರುತ್ತದೆ. ಜೋಗತಿಯರು ನೃತ್ಯ ಮಾಡುತ್ತಿದ್ದರೆ, ಅನಾದಿಯರು ಕೋಲಾಟ, ಡೊಳ್ಳುಕುಣಿತ, ವಾಲಗ, ಕಹಳೆಯ ನಿನಾದ ಝೇಂಕರಿಸುತ್ತದೆ. ಇತರ ಭಕ್ತರು ರಥಕ್ಕೆ ಬಾಳೆಹಣ್ಣನ್ನು ಹಾಕುತ್ತಿದ್ದರೆ ಇನ್ನೂ ಕೆಲವರು ಕೋಳಿಯನ್ನು ಹಾರಿಬಿಡುತ್ತಾರೆ. ಶೋಭಾಯಾತ್ರೆ ಮುಗಿದ ಮೇಲೆ ಅಮ್ಮನವರನ್ನು ಜಾತ್ರಾ ಗದ್ದುಗೆಯಲ್ಲಿ ಪ್ರತಿಷ್ಠಾಪನೆ ಮಾಡಲಾಗುತ್ತದೆ. ಎಂಟು ದಿನಗಳ ಕಾಲ ಜಗನ್ಮಾತೆ ಸಕಲ ಸರ್ವಾಲಂಕಾರಭೂಷಿತಳಾಗಿ ನಗರ ಮಧ್ಯಭಾಗದಲ್ಲಿನ ಗದ್ದುಗೆಯ ಮೇಲೆ ಕುಳಿತು ಜನರಿಗೆ ದರ್ಶನ ಭಾಗ್ಯ ಕರುಣಿಸುತ್ತಾಳೆ. ಜಾತ್ರೆ ಪ್ರಾರಂಭವಾದ ಕೆಲ ದಿನಗಳ ನಂತರ ಬುಧವಾರ ಜಾತ್ರಾ ವಿಧಿ ವಿಧಾನಗಳು ನೆರವೇರುತ್ತವೆ ನಾಡಿನ ಬಾಬುದಾರರಿಂದ ಕೊನೆಯ ಮಂಗಳಾರತಿ, ಶ್ರೀ ದೇವಿಯನ್ನು ಗದ್ದುಗೆಯಿಂದ ಇಳಿಸಿ ಮಂಟಪದ ಮಧ್ಯಭಾಗದಲ್ಲಿ ಕೂಡ್ರಿಸಿದಾಗ ಅನಾದಿಯವರು ಹುಲುಸು ಪ್ರಸಾದವನ್ನು ಪೂಜಿಸಿ ರೈತರಿಗೆ ವಿತರಿಸುತ್ತಾರೆ. ರೈತರು ಅದನ್ನು ತಮ್ಮ ಹೊಲದಲ್ಲಿ ಬಿತ್ತುತ್ತಾರೆ. ಶ್ರೀ ದೇವಿಯು ಜಾತ್ರೆಯ ಮಂಟಪದಿಂದ ರಥದಲ್ಲಿ ಮರಳುವುದಿಲ್ಲ ಬದಲಾಗಿ ವಿಶೇಷವಾಗಿ ಸಿದ್ಧಗೊಳಿಸಿದ ಅಟ್ಟಲಿನಲ್ಲಿ ಮರಳುತ್ತಾಳೆ.

ಜಾತ್ರೆಯ ಕೊನೆಯ ವಿಧಾನಗಳಲ್ಲಿ ಮಾತಂಗಿ ಚಪ್ಪರ ಸುಡುವುದೂ ಒಂದು. ದೇವಿಯು ಗದ್ದುಗೆಯಿಂದ ಮೆರವಣಿಗೆಯಲ್ಲಿ ಹೋಗುವಾಗ ಮಹಿಷಾಸುರನ ಸಂಹಾರ ಸಂಕೇತವಾಗಿ ಮಾತಂಗಿ ಚಪ್ಪರ ಸುಡುತ್ತಾರೆ ಜಾತ್ರೆಯ ಕಟ್ಟಕಡೆಯ ವಿಧಾನ ಪೂರ್ವ ದಿಕ್ಕಿನ ಗಡಿಯ ಗದ್ದುಗೆಗೆ ಹೋಗಿ ಮುಕ್ತಾಯದ ವಿಧಿ ನೆರವೇರಿಸಲಾಗುತ್ತದೆ, ಅಲ್ಲಿ ಶ್ರೀ ದೇವಿಯ ಮೂರ್ತಿಯನ್ನು ವಿಸರ್ಜಿಸಲಾಗುತ್ತದೆ. ಹೀಗೆ ಜಾತ್ರೆ ಸಂಪನ್ನಗೊಳ್ಳುತ್ತದೆ.[7]

**ಶ್ರೀ ಮಾರಿಕಾಂಬಾ ಜಾತ್ರೆ ಮತ್ತು ಕೋಣ ಬಲಿ**

ಈ ದೇವಾಲಯದಲ್ಲಿರುವ ಕೋಣವೂ ಈ ಜಾತ್ರೆಯ ಒಂದು ಭಾಗ. ಮೊದಲೇ ತಿಳಿಸಿದಂತೆ ಜಾತ್ರೆಯ ಸಮಯದಲ್ಲಿ ಕೋಣದ ಜೊತೆಗೆ ತಾಯಿ ಮಾರಿಕಾಂಬೆಯ ಮದುವೆಯನ್ನು ಕಂಕಣ ಕಟ್ಟುವ ಶಾಸ್ತ್ರದೊಂದಿಗೆ ಆರಂಭಿಸಲಾಗುತ್ತದೆ. 1933ಕ್ಕಿಂತ ಮೊದಲು ಕೋಣದ ಬಲಿ ಮೂಲಕ ಜಾತ್ರೆ ಮುಗಿಯುತ್ತಿತ್ತು, ಆದರೆ 1933 ರಲ್ಲಿ ಗಾಂಧೀಜೀಯವರ ಭೇಟಿಯಿಂದ ಕೋಣವನ್ನು ಬಲಿ ಕೊಡುವ ಪದ್ಧತಿ ನಿಂತಿತು. ಈಗ ಕೇವಲ ಬೂದುಗುಂಬಳ ಹುಲಿಯೊಂದಿಗೆ ಜಾತ್ರೆ ಮುಗಿಯುತ್ತದೆ. ಎರಡು ವರ್ಷಗಳಿಗೊಮ್ಮೆ ನಡೆಯುವ ಶ್ರೀ ಮಾರಿಕಾಂಬಾ ಜಾತ್ರೆ ಅತ್ಯಂತ ವಿಶಿಷ್ಟವಾದುದು. ಶ್ರೀ ಮಾರಿಕಾಂಬಾ ಜಾತ್ರೆಯ ಆಚರಣೆ ಮತ್ತು ವಿಧಿಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಿದರೆ ಈ ಆಚರಣೆಗಳು ನಮ್ಮ ಸಮ್ಮಿಶ್ರ, ಸಂಕೀರ್ಣ ಸಂಸ್ಕೃತಿಯನ್ನು ಅನಾವರಣಗೊಳಿಸುತ್ತವೆ. ಪಾತ್ರೆಯ ಆಚರಣೆಗಳಲ್ಲಿ ಯಾವುದೋ ಕಾಲಕ್ಕೆ ಘಟಿಸಬಹುದಾದ ವರ್ಣಸಂಕರದ ಘಟನೆ. ಅದರ ಅಪರಾಧ, ಶಿಕ್ಷೆಯ ಸ್ವರೂಪ ಮುಂತಾದವನ್ನು ತಳಕು ಹಾಕಿ ಆ ಹೋರಾಟದಲ್ಲಿ ಸತಿಯಿಂದ ಹತನಾದ ಪತಿ, ಪತ್ನಿಯೂ ಮಡಿದು ಮಹಾಸತಿಯಾದ ಹೆಂಡತಿ ಈ ಮುಂತಾದ ಘಟನಾವಳಿಗಳನ್ನುಳ್ಳ ಆಚರಣೆಗಳು ಸ್ಥೂಲನೋಟಕ್ಕೆ ಕಾಣಬಹುದಾದರೂ ಅದಕ್ಕಿಂತ ಮುಖ್ಯವಾಗಿ ಇಲ್ಲಿ ಕೃಷಿ ಸಮೃದ್ಧಿಯ ಹಾಗೂ ರೋಗ ವಿಮುಕ್ತಿ ಪಡೆಯುವ ಹಾರೈಕೆಯನ್ನು ಕಾಣಬಹುದು.

**ಪರಾಮರ್ಶನ ಕೃತಿಗಳು**


- ನಾಯಕ್ ಎನ್. ಆರ್. *ಶಿರಸಿಯ ಶ್ರೀಮಾರಿಕಾಂಬೆ ಮತ್ತು ಜಾತ್ರೆ.*
- ಫಾಲಾಕ್ಷ. *ಸಮಗ್ರ ಕರ್ನಾಟಕದ ಇತಿಹಾಸ.*
- ಶಾಸ್ತ್ರಿ ಏ.ಕೆ. *ಶಿರಸಿ ತಾಲ್ಲೂಕಿನ ಐತಿಹಾಸಿಕ ಆಕರಗಳು.*
- ಸೂರ್ಯನಾಥ್ ಕಾಮತ್. *ಕರ್ನಾಟಕದ ಸಂಕ್ಷಿಪ್ತ ಇತಿಹಾಸ.*


[7] ಎನ್. ಆರ್. ನಾಯಕ್. ಶಿರಸಿಯ ಶ್ರೀಮಾರಿಕಾಂಬೆ ಮತ್ತು ಜಾತ್ರೆ